ದೂರವಾಣಿ ಸಂಖ್ಯೆ : 08182 229933
ಫ್ಯಾಕ್ಸ್ ಸಂಖ್ಯೆ : 08182 264100

ಕರ್ನಾಟಕ ಸರ್ಕಾರ

# ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ವೈದ್ಯಕೀಯ ಶಿಕ್ಷಣ ಸ್ವಾಯುತ್ತ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ – 577201
www.sims-shimoga.com

ಸಂಖ್ಯೆ: ಶಿವೈವಿಸಂ/ಆಡಳಿತ/2013–14/ ದಿನಾಂಕ: 09/10/2013

ಗೆ,

ವಿಷಯ: ಬೃಹತ್ ವೈದ್ಯಕೀಯ ವಸ್ತುಪ್ರದರ್ಶನವನ್ನು ಹಮ್ಮಿಕೊಂಡಿರುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನವೆಂಬರ್ 7, 8, ಮತ್ತು 9 ನೇ ದಿನಾಂಕದಂದು **EXPO SIMS-2013** ಎಂಬ ಶೀರ್ಷಿಕೆಯಡಿ ಬೃಹತ್ ಮಟ್ಟದ ವೈದ್ಯಕೀಯ ವಸ್ತುಪ್ರದರ್ಶನವನ್ನು "ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ" ಯಲ್ಲಿ ಹಮ್ಮಿಕೊಳ್ಳಲಾಗಿದೆ. ದಿ: 7/11/2013 ಮತ್ತು 08/11/2013 ರಂದು ಪ್ರೌಢಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆಂದು ಮೀಸಲಿರಿಸಲಾಗಿದೆ. ವೈದ್ಯಕೀಯ ಲೋಕದ ವಿಸ್ಮಯಗಳನ್ನು ಸರಳೀಕರಿಸಿ ವಿದ್ಯಾರ್ಥಿಗಳಿಗೂ ಸಾಮಾನ್ಯ ಜನತೆಗೂ ಪರಿಚಯಿಸುವುದು ಮತ್ತು ಸಾಮಾನ್ಯ ಖಾಯಿಲೆಗಳನ್ನು ತಡೆಗಟ್ಟುವ ಬಗ್ಗೆ ಜಾಗೃತಿ ಮೂಡಿಸುವುದು, ನಮ್ಮ ಈ ಕಾರ್ಯಕ್ರಮದ ಧ್ಯೇಯ ಹಾಗೂ ಉದ್ದೇಶ.

ಇಂತಹ ಒಂದು ವಸ್ತುಪ್ರದರ್ಶನ ಶಿವಮೊಗ್ಗ ನಗರದಲ್ಲಿಯೇ ಮೊಟ್ಟಮೊದಲ ಬಾರಿಗೆ ಜರುಗುತ್ತಿದ್ದು, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಾಗೂ ಬೌದ್ಧಿಕವಾಗಿ ಸಹಕಾರಿಯಾಗಲಿದೆ. ಇದರ ಸದುಪಯೋಗಪಡಿಸಿಕೊಳ್ಳಬೇಕಾಗಿ ಈ ಮೂಲಕ ಕೋರಲಾಗಿದೆ. ತಮ್ಮ ಶಿಕ್ಷಣ ಸಂಸ್ಥೆಯಿಂದ ಸಾರ್ಥಕ ಪ್ರತಿಕ್ರಿಯೆಯನ್ನು ಎದುರು ನೋಡುತ್ತಿದ್ದು, ಭಾಗವಹಿಸುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಮುಂಚಿತವಾಗಿ ಪತ್ರ ಮುಖೇನ ಅಥವಾ ಕೆಳಕಾಣಿಸಿದ ದೂರವಾಣಿ ಮುಖೇನ ತಿಳಿಸಬೇಕಾಗಿ ಕೋರಲಾಗಿದೆ. ಎಲ್ಲಾ ಶಾಲಾ ಕಾಲೇಜುಗಳಿಂದ ಭಾಗವಹಿಸುವ ವಿದ್ಯಾರ್ಥಿಗಳ ಸಂಖ್ಯೆಯನ್ನಾಧರಿಸಿ ಪ್ರತಿ ಶಾಲೆಯವರು ಭಾಗವಹಿಸುವ ಸಮಯ ಮತ್ತು ದಿನಾಂಕವನ್ನು ನಿಗಧಿಪಡಿಸಿ ತಮಗೆ ತಿಳಿಸಲಾಗುತ್ತದೆ.

ನಿರ್ದೇಶಕರು
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಶಿವಮೊಗ್ಗ

ವಿವೇಕ್ ರೆಡ್ಡಿ
ವಿದ್ಯಾರ್ಥಿಗಳ ಪ್ರತಿನಿಧಿ
ಸಿಮ್ಸ್, ಶಿವಮೊಗ್ಗ
**ದೂ.ಸಂ:8867172150.**
**9591543931.**